ಕೆ.ಎಸ್.ಟಿ.ಡಿ.ಸಿ.ಗೆ ಬಾಡಿಗೆ ಆಧಾರದ ಮೇಲೆ ತಿರುಮಲ ಬೆಟ್ಟದ ಮೇಲೆ ೪೦ ಕೊಠಡಿಗಳ ನಿರ್ಮಾಣ

೧೨೬೧ ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೆ. ಎಸ್. ಟಿ. ಡಿ.ಸಿ.ಗೆ ಬಾಡಿಗೆ ಆಧಾರದ ಮೇಲೆ ತಿರುಮಲ ಬೆಟ್ಟದ ಮೇಲೆ ೪೦ ಕೊಠಡಿಗಳನ್ನು ಸರ್ಕಾರ ನೀಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಸದರಿ ಕೊಠಡಿಗಳಿಗೆ ಪ್ರತಿ ವರ್ಷಕ್ಕೆ ನಿಗದಿಪಡಿಸಿರುವ ಬಾಡಿಗೆ ಮೊತ್ತ ಎಷ್ಟು ?

ಇ) ೧೯೮೯-೯೦ರ ಸಾಲಿನಲ್ಲಿ ಕೆ.ಎಸ್.ಟಿ.ಡಿ.ಸಿ. ಯಿಂದ ಬಾಕಿ ಇರುವ ಬಾಡಿಗೆ ಮೊತ್ತ ಎಷ್ಟು ?

ಈ) ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಎರಡರಷ್ಟು ಬಾಡಿಗೆಯನ್ನು ಕೆ.ಎಸ್.ಟಿ.ಡಿ.ಸಿ. ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಹೌದು, ಪ್ರವಾಸಿ ಸೌಧ ಕಟ್ಟಡದಲ್ಲಿ ೩೮ ಕೊಠಡಿಗಳನ್ನು ಮಾತ್ರ:

ಆ) ರೂ. ೨೦೦ ಲಕ್ಷ ಪ್ರತಿ ವರ್ಷಕ್ಕೆ.

ಇ) ರೂ. ೬೦೦ ಲಕ್ಷ (೨೭-೫-೯೦ರಲ್ಲಿ ಕೆ. ಎಸ್. ಟಿ. ಡಿ. ಸಿ. ಎಲ್ಲಾ ಬಾಕಿಯನ್ನು ಪಾವತಿ ಮಾಡಿದೆ).

ಈ) ಇಲ್ಲ.

ತಿರುಮಲ ಬೆಟ್ಟದ ಮೇಲಿರುವ ಕರ್ನಾಟಕ ಸರ್ಕಾರದ ಆಸ್ತಿಯ ವಿವರ

೧೩೧೪. ಶ್ರೀ ಪರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಕಂದಾಯ ಹಾಗೂ ಕಾರ್ಮಿಕ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ತಿರುಮಲ ಬೆಟ್ಟದ ಮೇಲೆ ಕರ್ನಾಟಕ ಸರ್ಕಾರದ ಆಸ್ತಿಯ ವಿವರಗಳೇನು ?

ಆ) ಕರ್ನಾಟಕ ಸರ್ಕಾರದ ಸೇರಿದ ೨ ಎಕರೆ ಜಮೀನನ್ನು ಟಿ.ಟಿ.ಡಿ. ಪ್ರಾಧಿಕಾರಿ ತೆಗೆದು ಕೊಂಡಿರುವುದು ನಿಜವೇ ?

ಇ) ಹಾಗಿದ್ದಲ್ಲಿ ತಿರುಮಲ ಬೆಟ್ಟದ ಮೇಲಿರುವ ಬಹು ಅಮೂಲ್ಯವಾದ ೨ ಎಕರೆ ಜಮೀನನ್ನು ವಿಭಾಗಿಸಲು ಸರ್ಕಾರ ಅನುಮತಿ ನೀಡಿದೆಯೇ ?

ಈ) ಮೇಲ್ಕಂಡ ಜಮೀನನ್ನು ಹಿಂತೆಗೆದುಕೊಳ್ಳಲು ಅಥವಾ ಬದಲಿ ಜಮೀನನ್ನು ಪಡೆಯಲು ಸರ್ಕಾರ ಯಾವುದಾದರೂ ಕ್ರಮ ತೆಗೆದುಕೊಂಡಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ೧. ಸ: ನಂ: ೬೩೬:೩ ೧ ಎಕರೆ ೯೦ ಸೆಂಟುಗಳು

೨. ಸ: ನಂ: ೬೩೬:೪

೨. ಸ: ನಂ: ೬೩೭:೧ ೨ ಎಕರೆ ೫೫ ಸೆಂಟುಗಳು

೩. ಸ: ನಂ: ೫೯೨: ಭಾಗ ೦.೩೮ ಸೆಂಟುಗಳು (ಕರ್ನಾಟಕ ಪ್ರವಾಸಿ ಸೌಧ ಕಟ್ಟಡ)

೪. ಸ: ನಂ: ೫೯೨: ಭಾಗ ೦.೨೨ ಸೆಂಟುಗಳು (ಓವರ್ ಹೆಡ್ ಟ್ಯಾಂಕ್)

೫. ಸ: ನಂ: ೫೯೨: ಭಾಗ ೦.೪೮ ಸೆಂಟ್ಸ್ (ಖಾಲಿ ಜಾಗ)

೬. ಸ: ನಂ: ೫೯೨: ಭಾಗ ೦.೭೨ ಸೆಂಟ್ಸ್ (ಕೊಳ್ಳೆ ಗುಂಟಾ)

ಆ) ಹೌದು.

ಇ) ಇಲ್ಲ.

ಈ) ಗುತ್ತಿಗೆಯನ್ನು ನವೀಕರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.